ಸಾರಿಗೆ ಬಸ್ ಪ್ರಯಾಣದಲ್ಲಿ ಮಂಡಲ ಪಂಚಾಯತ್ ಸದಸ್ಯರಿಗೆ ಟಿಕೇಟು ರಹಿತ ಪ್ರಯಾಣ ಒದಗಿಸುವ ವಿಚಾರ.

೯೧೦. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್ ಹಾಗೂ ಮಂಡಳ ಪಂಚಾಯತ್ ಸದಸ್ಯರಿಗೆ ಬಸ್ಸಿನ ಪ್ರಯಾಣವನ್ನು ಟಿಕೇಟು ರಹಿತ ಕೊಡುವ ವಿಚಾರವಿದೆಯೋ ಹೇಗೆ ?

ಆ) ಮಾಜಿ ಶಾಸಕರಿಗೆ ಬಸ್ಸಿನಲ್ಲಿ ಪ್ರಯಾಣ ಉಚಿತ ಕೊಡುವಿರಾ ?

ಇ) ಕೆ. ಎಸ್. ಟಿ. ಡಿ. ಸಿ. ಬಸ್ಸಿನಲ್ಲಿ ಶಾಸಕರಿಗೂ ಪ್ರಯಾಣ ಕೊಡುವಿರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಅವಿವಾಹಿತರಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ

೯೧೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯನ ಹಳ್ಳಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅವಿವಾಹಿತ ಯುವಕ ಮತ್ತು ಯುವತಿಯರಿಗೂ ಸಂತಾನ ಹರಣ ಶಸ್ತ್ರಕ್ರಿಯೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದುವರೆಗೆ ಎಷ್ಟು ಜನರಿಗೆ ಮಾಡಲಾಗಿದೆ ?

ಇ) ಈ ರೀತಿ ಸಂತಾನ ಹರಣ ಚಿಕಿತ್ಸೆ ಮಾಡಲು ನಿಯಮಗಳಲ್ಲಿ ಅವಕಾಶವಿದೆಯೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಇಬ್ಬರಿಗೆ.

ಇ) ಇಲ್ಲ.

ಕರ್ನಾಟಕದಲ್ಲಿ ಆರ್ಥಿಕ ಮಂಗ್ಗಟ್ಟು

೯೧೩. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು ಇರುವುದು ನಿಜವೇ ? ಮತ್ತು ಖಜಾನೆಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಮಂಡಿಸಿದ ಸರ್ಕಾರದ ವೇತನಾದೇಶ ಚೆಕ್ಕುಗಳು ಅವುಗಳಿಂದ ತಿರಸ್ಕರಿಸಲ್ಪಟ್ಟಿದೆಯೆ ?

ಆ) ಹಾಗಿದ್ದಲಿ ಅಂತಹ ಚಿಕ್ಕುಗಳನ್ನು ಇತ್ಯರ್ಥ ಮಾಡುವಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?